# ಗೀತೆಯ ಮೂಲಕ ಶಿಕ್ಷಣಯೋಗ

ಡಾ. ಎಚ್.ಎನ್. ಮುರಳೀಧರ

ಒಂದು ಜನಾಂಗದ ಉನ್ನತಿಯನ್ನು ನಿರ್ಧರಿಸುವಲ್ಲಿ ಶಿಕ್ಷಣವು ಮಹತ್ವದ ಪಾತ್ರ ವಹಿಸುತ್ತದೆ. ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಿರುವ ಭಾರತದಲ್ಲಿ ಶಿಕ್ಷಣ ಪದ್ಧತಿಯಲ್ಲಿ ಗೀತೆಯ ಮೌಲ್ಯಗಳನ್ನು ಅಳವಡಿಸುವುದು ಅತ್ಯಂತ ಆವಶ್ಯಕವಾಗಿದೆ. ಈ ಕುರಿತು ವಿವೇಚಿಸಿರುವ ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಾಪಕರು. ಉತ್ತಮ ವಾಗ್ಮಿಗಳು ಹಾಗೂ ಲೇಖಕರಾಗಿರುವ ಅವರು ದಿವ್ಯತ್ರಯರ ಕೃತಿಗಳನ್ನು ಕುರಿತು ಆಳವಾಗಿ ಅಧ್ಯಯನ ಮಾಡಿದ್ದಾರೆ ಹಾಗೂ ಹಲವು ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.

ಈಗ ನಾವು ಸಾಮಾನ್ಯವಾಗಿ ಯಾವುದನ್ನು ಶಿಕ್ಷಣತತ್ತ್ವವೆಂದು ಕರೆಯುತ್ತೇವೆಯೋ ಅದನ್ನು ನೇರವಾಗಿ ಆ ರೂಪದಲ್ಲಿ ಗೀತೆಯಲ್ಲಿ ಕಾಣಲು ಸಾಧ್ಯವಿಲ್ಲವೆಂಬುದು ನಿಜ. ಆದರೆ ಈ ಕಾರಣದಿಂದಲೇ ನಮಗೊಂದು ಪ್ರಶ್ನೆ ಇದಿರಾಗುತ್ತದೆ : ಶುದ್ಧಾಂಗವಾದ ಶಿಕ್ಷಣತತ್ತ್ವವೆನ್ನುವುದೊಂದು ಇದೆಯೇ ಅಥವಾ ಅದು ಜೀವನತತ್ತ್ವವೊಂದರ ಜೊತೆ ತಳುಕು ಹಾಕಿಕೊಂಡಿದೆಯೆ? ಈ ಎರಡನೆಯ ಆಯ್ಕೆ ನಮ್ಮದೆನ್ನುವುದಾದರೆ ಆಗ ಶಿಕ್ಷಣತತ್ತ್ವವೊಂದನ್ನು ನಿಷ್ಪನ್ನಗೊಳಿಸಿಕೊಳ್ಳಬಲ್ಲ ಉಪಕರಣಗಳನ್ನು ಗೀತೆಯಲ್ಲಿ ಕಂಡುಕೊಳ್ಳುವ ಸಾಧ್ಯತೆಯ ಬಗೆಗೆ ಯೋಚಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಮೂಡಿಬಂದ ಟಿಪ್ಪಣಿಗಳು ಈ ಬರಹ.

ಗೀತೆಯ ಪ್ರಧಾನವಾದ ಜಿಜ್ಞಾಸೆಗಳಲ್ಲಿ ಅಸ್ತಿತ್ವದ ಸ್ವರೂಪವೂ ಸೇರಿದೆ. ವ್ಯಕ್ತಿ ಹಾಗೂ ವಿಶ್ವ ಇವುಗಳ ನಡುವಣ ಸಂಬಂಧ, ಅರ್ಥಾತ್ ವ್ಯಷ್ಟಿ-ಸಮಷ್ಟಿಗಳ ನಡುವಣ ಸಂಬಂಧವನ್ನು ಗೀತೆ ನಿರ್ವಚಿಸುತ್ತದೆ. ಇವುಗಳ ನಡುವಣ ಸಮನ್ವಯ ಅಥವಾ ಸಮತೋಲನ ಅದರ ಮುಖ್ಯ ಕಾಳಜಿಯಾಗಿದೆ. ಅದರ ಪ್ರಕಾರ ವ್ಯಕ್ತಿಯ ಅರಿವು ಹಾಗೂ ವಿಶ್ವದ ಅರಿವು ಒಂದೇ ಅರಿವಿನ ಎರಡು ಭಿನ್ನ ಆಯಾಮಗಳು. ವ್ಯಷ್ಟಿಯ ನೆಲೆಯಲ್ಲಿ ವ್ಯಕ್ತಿಗತವಾದ ಪ್ರಜ್ಞೆ ಹಾಗೂ ಕರ್ಮಗಳಿದ್ದರೆ ಸಮಷ್ಟಿಯ ನೆಲೆಯಲ್ಲಿ ಋತವಿದೆ. ವ್ಯಕ್ತಿಯ ಕರ್ಮವೂ ವಿಶ್ವದ ಋತವೂ ಸಮಾನ ಶ್ರುತಿಯೊಂದರಲ್ಲಿ ಏಕೀಭವಿಸುವುದರಲ್ಲಿ ಬದುಕಿನ ಅರ್ಥಪೂರ್ಣತೆಯನ್ನು ಅದು ಗುರುತಿಸುತ್ತದೆ. ವ್ಯಷ್ಟಿಯ ಸಂದರ್ಭದಲ್ಲಿ ಸಮಷ್ಟಿಯ ಸ್ಥಾನೀಕರಣವೂ, ಸಮಷ್ಟಿಯ ಸಂದರ್ಭದಲ್ಲಿ ವ್ಯಷ್ಟಿಯ ಸ್ಥಾನೀಕರಣವೂ ಏರ್ಪಟ್ಟಾಗ ಮಾತ್ರ ಈ ಅರ್ಥಪೂರ್ಣತೆ ವಾಸ್ತವವಾಗಲು ಸಾಧ್ಯ. ಈ ದೃಷ್ಟಿಯಿಂದ ಪ್ರವೃತ್ತವಾಗಿರುವುದು ಇಲ್ಲಿನ ಅನಾಸಕ್ತಿಯೋಗ.

ವ್ಯಕ್ತಿಗತ ಅಸ್ತಿತ್ವಗಳೆಲ್ಲವೂ ವಿಶ್ವಯಂತ್ರದ ಚಲನೆಗಾಗಿ ದುಡಿಯುವ ಭಾಗಗಳು ಎಂಬ ಕಲ್ಪನೆ ಒಂದು ಕಡೆಯಿಂದ ವ್ಯಕ್ತಿಯ ಕರ್ಮದ ಸ್ವರೂಪವನ್ನು ನಿರ್ಧರಿಸುತ್ತಲೇ ಇನ್ನೊಂದು ಕಡೆಯಿಂದ ವಿಶ್ವದೊಂದಿಗೆ ಸ್ಥಾಪಿಸಿಕೊಳ್ಳಬೇಕಾದ ಸಂಬಂಧದ ಬಗೆಗೂ ಹೇಳುತ್ತದೆ. ಇರವನ್ನು ಕುರಿತು ಈ ಮೀಮಾಂಸೆಯಿಂದಲೇ ಒಂದು ಅರಿವಿನ ಮೀಮಾಂಸೆಯೂ ನಿಷ್ಪನ್ನವಾಗುತ್ತದೆ. ಕರ್ಮವೂ ಜ್ಞಾನವೂ



ಇಲ್ಲಿ ಪೃಥಕ್ಕರಣಗೊಂಡಿರುವುದು ಗ್ರಹಿಕೆ ಹಾಗೂ ಅನುಷ್ಠಾನಗಳ ಸೌಕರ್ಯಕ್ಕಾಗಿಯೇ ಹೊರತು ವ್ಯಕ್ತಿತ್ವವನ್ನೂ ಅಂತೆಯೇ ಅಸ್ತಿತ್ವವನ್ನೂ ವಿಭಜಿಸುವುದಕ್ಕಾಗಿ ಅಲ್ಲ.

ಗೀತೆಯು ಕರ್ಮವನ್ನು ಫಲದ ನಂಟಿನಿಂದ ಪಾರು ಮಾಡಲು ಹವಣಿಸುತ್ತದೆ. ಕರ್ಮವು ವ್ಯಕ್ತಿಗತ ಜವಾಬ್ದಾರಿಯಾದರೆ ಫಲದ ವಿತರಣೆಯ ಹೊಣೆ ಋತದ್ದು ಎನ್ನುವುದು ಅದರ ಅಭಿಮತ. ವ್ಯಕ್ತಿಗತ ಫಲಕ್ಕಾಗಿ ಕರ್ಮನಿರತರಾಗುವವರನ್ನು ಅದು ಕೃಪಣರೆಂದು ಕರೆಯುತ್ತದೆ. ಸಮಷ್ಟಿಯ ಹಿತಕ್ಕಾಗಿ ವ್ಯಷ್ಟಿಯ ದುಡಿಮೆಯನ್ನು ಅದು ಯಜ್ಞವೆನ್ನುತ್ತದೆ. ವ್ಯಕ್ತಿಗತವಾದ ಕರ್ಮವು ಯಜ್ಞವಾಗಿ ಪರಿವರ್ತನೆಗೊಳ್ಳುವುದರಲ್ಲೇ ಜ್ಞಾನದ ಪಾತ್ರವಿದೆ. ಅದರ ಪ್ರಕಾರ ಜ್ಞಾನವು ಕಾಮದಿಂದ ಮುಚ್ಚಲ್ಪಡುತ್ತದೆ *(೩.೩೯)* ಜ್ಞಾನದಿಂದ ಕಾಮವನ್ನು ದಾಟುವುದರಲ್ಲೇ ಯೋಗದ ಆಯಾಮವೂ ಇದೆ. ಯೋಗವೆಂದರೆ ಸಮತ್ವವೆಂಬ ಮಾತಿನ ಮೂಲದಲ್ಲಿ

(೨.೪೮) ಇದರ ಸೂಚನೆಯನ್ನು ಗುರುತಿಸಬಹುದು. ಕರ್ಮವು ಯಜ್ಞವಾಗಬೇಕಾದರೆ ಅದನ್ನು ಯೋಗಸ್ಥವಾಗಿ ಸಾಧಿಸಬೇಕಾಗುತ್ತದೆ (೨.೪೮), ಕರ್ಮವನ್ನು ಕೌಶಲದಿಂದ ಮಾಡುವುದರಲ್ಲಿ ಯೋಗವಿದೆ (೨.೫೦) ಎಂಬ ಮಾತುಗಳು ಯೋಗದ ಸಂಬಂಧದಲ್ಲಿ ಕರ್ಮವನ್ನು ಅರ್ಥವಿಸುತ್ತದೆ. ಯಜ್ಞವೆಂದು ಮಾಡದ ಕರ್ಮವು ಬಂಧನಕ್ಕೆ ಒಳಪಡಿಸುವುದರಿಂದ ಯಜ್ಞಕ್ಕೋಸ್ಕರ ಆಸಕ್ತಿಯಿಂದ ಮುಕ್ತನಾಗಿ ಕರ್ಮವನ್ನು ಮಾಡಬೇಕೆಂದು (೩.೯) ಅದರ ಆದೇಶ.

ಇರವಿಗೂ ಕ್ರಿಯೆಗೂ ಏರ್ಪಡಬೇಕಾದ ಸಂಬಂಧದ ಆದರ್ಶ ರೂಪವನ್ನು ಈ ಮೂಲಕ ಗೀತೆ ಹೇಳಿದಂತಾಯಿ ತಷ್ಟೆ? ಇದನ್ನು ಯಥೋಚಿತವಾಗಿ ಅರಿವಿನ ಸಂದರ್ಭಕ್ಕೂ ವಿಸ್ತರಿಸಿಕೊಂಡು ಅರಿವಿನ ಮೀಮಾಂಸೆಯನ್ನು ನಿಷ್ಪನ್ನಗೊಳಿಸಿಕೊಳ್ಳಲು ಸಾಧ್ಯವಿದೆ. ಇದಕ್ಕೆ ಸಂಬಂಧಿಸಿದಂತೆ ಅರಿಯುವ ಪ್ರಕ್ರಿಯೆಯನ್ನು ಕುರಿತ ನಮ್ಮ ಕೆಲವು ಪೂರ್ವಗ್ರಹಿಕೆಗಳನ್ನು ಪುನರಾಲೋಚನೆಗೆ ಒಳಪಡಿಸುವ ಅಗತ್ಯವೂ ಇದೆ.

ಈ ಸಂದರ್ಭದಲ್ಲೇ ಅರಿವಿನ ಖಾಸಗಿತನ ಅಥವಾ ವೈಯ ಕ್ತಿಕ ಅಧಿಕಾರದ ಪ್ರಶ್ನೆಯೂ ಬರುತ್ತದೆ. ಇಂದು ಮುಖ್ಯವಾಗಿ ಶಿಕ್ಷಣವನ್ನು ವ್ಯಕ್ತಿಯ ಸಂದರ್ಭದಲ್ಲಿ ಅಥವಾ ಹೆಚ್ಚೆಂದರೆ ಕುಟುಂಬದ ಸಂದರ್ಭದಲ್ಲಿ ಇಟ್ಟು ನೋಡಲಾಗುತ್ತಿದೆ. ವ್ಯಕ್ತಿಗತ ವಾದ ಪ್ರಗತಿ ಹಾಗೂ ಆಶೋತ್ತರಗಳ ಪೂರೈಕೆಯ ಉಪಕರಣವಾಗಿ ಅದನ್ನು ನೋಡಲಾಗುತ್ತಿದೆ. ಇದರಿಂದ ಕಲಿಕೆಯ ಸಂಗತಿಯನ್ನು ಕಲಿಯುವವರಿಂದ ಬಾಹ್ಯದಲ್ಲಿ ಇರಿಸಿದಂತೆ ಆಗಿದೆಯಲ್ಲದೆ ಕಲಿಕೆಗೆ ಶೈಕ್ಷಣಿಕಕ್ಕಿಂತ ಹೆಚ್ಚಾಗಿ ಒಂದು ಸಂಕುಚಿತ ನೆಲೆಯಲ್ಲಿ ಸಾಮಾಜಿಕ ಅಸ್ತಿತ್ವವನ್ನು ಕಲ್ಪಿಸಿದಂತಾಗಿದೆ. ಇದರಿಂದ ಸಹಜವಾಗಿಯೇ ಸಾಮಾಜಿಕ ಅಸ್ತಿತ್ವದಲ್ಲಿ ಚಾಲ್ತಿಯಲ್ಲಿರುವ ಶ್ರೇಣೀಕರಣದ ಎಲ್ಲಾ ಆಯಾಮಗಳು ಶೈಕ್ಷಣಿಕ ವಲಯವನ್ನೂ ಪ್ರವೇಶಿಸುವಂತಾಗುತ್ತದೆ. ಹೀಗಾಗಿ ನಮ್ಮ ಕಲಿಕೆಯ ಪ್ರಕ್ರಿಯೆ ಸಾಮಾಜಿಕವಾಗಿ ವಾಸ್ತವವಾದಷ್ಟು ಶೈಕ್ಷಣಿಕವಾಗಿ ಆಗದ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಈ ಸ್ವರೂಪದ ಸಾಮಾಜಿಕತೆಗೂ ಆರ್ಥಿಕತೆಗೂ ಬಹಳ ಹತ್ತಿರದ ನಂಟಿರುವುದರಿಂದ ಶೈಕ್ಷಣಿಕತೆಯ ನಿಯಂತ್ರಣವನ್ನು ವಾಣಿಜ್ಯದ ಕೈಯಲ್ಲಿ ಕೊಟ್ಟಂತೆಯೂ ಆಗಿದೆ. ಇದರಿಂದ ಉಂಟಾಗಿರುವ ಪರಿಣಾಮಗಳಲ್ಲಿ ಪ್ರಾಥಮಿಕವಾದುದೆಂದರೆ ಶಿಕ್ಷಣವೆಂಬ ಪ್ರಕ್ರಿಯೆ ಪ್ರಯೋಜನದೊಂದಿಗೆ ನೇರವಾಗಿ ತಳುಕು ಹಾಕಿಕೊಳ್ಳುವಂತಾದುದು. ಹೀಗೆ ಶಿಕ್ಷಣವೆನ್ನುವುದು ಲಾಭದ ಹೂಡಿಕೆಯಾಗಿ ಪರಿವರ್ತಿತವಾದಾಗ ಸಹಜವಾಗಿಯೇ ಶಿಕ್ಷಣದ ಸಾಂಸ್ಥಿಕತೆಗೂ ಒಂದು ಉದ್ಯಮದ ಸ್ವರೂಪವೇ ಬಂದಿರುವುದನ್ನು ಸಮಕಾಲೀನ ಸನ್ನಿವೇಶದಲ್ಲಿ ಸ್ಪಷ್ಟವಾಗಿಯೇ ಕಾಣುತ್ತಿದ್ದೇವೆ.

ಈ ಎಲ್ಲ ಪರಿಣಾಮಗಳ ಹಿಂದೆ ಅರಿವು-ಇರವುಗಳಿಗೆ ಸಂಬಂಧಿಸಿದ ವಿಭಜನೆಗಳಿರುವುದೆಂದು ಮತ್ತೆ ಹೇಳಬೇಕಾಗಿದೆ. ಮೊದಲನೆಯದಾಗಿ ಇಲ್ಲಿ ಇರವು-ಇರವುಗಳ ನಡುವಣ ವಿಭಜನೆಯಿದೆ. ವ್ಯಕ್ತಿಗತ ಇರವನ್ನು ವಿಶ್ವಾತ್ಮಕ ಇರವಿನಿಂದ ವಿಭಜಿಸಲಾಗಿದೆ. ಹೀಗಾಗಿ ವಿಭಿನ್ನ ವ್ಯಕ್ತಿಗತ ಇರವುಗಳ ನಡುವೆಯೂ ಸೀಳುಗಳು ಏರ್ಪಟ್ಟಿವೆ. ಇದೇ ಪ್ರಕ್ರಿಯೆಯ ಇನ್ನೊಂದು ಆಯಾಮದಲ್ಲಿ ಅರಿವು-ಅರಿವುಗಳ ನಡುವೆಯೂ ವಿಭಜನೆಗಳಾಗಿವೆ. ಮುಖ್ಯವಾಗಿ ಇದರ ಒಂದು ಸಾಮಾಜಿಕ ಪರಿಣಾಮವೆಂದರೆ ಅರಿವುಗಳ ನಡುವೆಯೇ ಶ್ರೇಣೀಕರಣ ವೇರ್ಪಟ್ಟಿರುವುದು. ಕೆಲವು ಅರಿವುಗಳು ಲಾಭದಾಯಕವೆಂದೂ, ಹಾಗಾಗಿಯೇ ಶ್ರೇಷ್ಠವೆಂದೂ ಪರಿ ಗಣಿತವಾಗಿದ್ದರೆ ಹಾಗಿಲ್ಲವೆಂಬ ಕಾರಣಕ್ಕಾಗಿಯೇ ಇನ್ನೆಷ್ಟೋ ಅರಿವುಗಳು ಅವಗಣನೆಗೆ ಒಳಗಾಗಿವೆ. ಅರಿಯುವ ಪ್ರಕ್ರಿಯೆಯೆಂಬ ಕರ್ಮವು ಹೀಗೆ ನೇರವಾಗಿ ವಾಣಿಜ್ಯದ ಫಲಾಪೇಕ್ಷೆಯೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡಿದ್ದರಿಂದ ಎರಡು ಬಗೆಯ ಅರಿಯುವ ವರ್ಗವನ್ನು ನಾವು ಸೃಷ್ಟಿಸಿದಂತಾಗಿದೆ. ಒಂದು, ತಮಗೆ ದೊರೆತ ಅರಿವಿನ ಕಾರಣಕ್ಕೆ ಲಾಭವನ್ನು ಮಾಡಿಕೊಂಡು ತತ್ಪರಿಣಾಮವಾಗಿ ಅಹಂಕಾರಿಗಳೂ ಸ್ವಾರ್ಥಿಗಳೂ ಆದವರು; ಇನ್ನೊಂದು, ಆ ಬಗೆಯ ಅರಿವಿನಿಂದ ವಂಚಿತರಾದ ಕಾರಣಕ್ಕೆ ತಮ್ಮನ್ನು ತಾವು ನಿಷ್ಪ್ರಯೋಜಕರೆಂದು ಹಳಿದುಕೊಂಡು ಖಿನ್ನರಾದವರು. ಅರಿವಿನ ಪ್ರಕ್ರಿಯೆಯು ಯಜ್ಞವಾದಾಗ ಮಾತ್ರ ಈ ಬಗೆಯ ಸನ್ನಿವೇಶಗಳಿಂದ ಪಾರಾಗಲು ಸಾಧ್ಯ.

ಅರಿವಿನ ಪ್ರಕ್ರಿಯೆಯು ಯಜ್ಞವಾಗುವುದು ಎಂಬ ಮಾತು ಒಂದಿಷ್ಟು ವಿಸ್ತರಣೆಯನ್ನು ಬಯಸುತ್ತದೆ. ಗೀತೆಯ 'ಧ್ಯಾನಯೋಗ'ದಲ್ಲಿ ಬಂದಿರುವ ಒಂದು ಮಾತು ಹೀಗಿದೆ : 'ಎಲ್ಲೆಲ್ಲಿಯೂ ಸಮದರ್ಶಿಯಾಗಿರುವ ಯೋಗಯುಕ್ತಾತ್ಮನು ಆತ್ಮನನ್ನು ಸರ್ವಭೂತಗಳಲ್ಲಿಯೂ, ಸರ್ವಭೂತಗಳನ್ನು ಆತ್ಮನಲ್ಲಿಯೂ ಕಾಣುತ್ತಾನೆ.' (೬.೨೯) ಬೇರೆಯ ಮಾತುಗಳಲ್ಲಿ ಹೇಳುವುದಾದರೆ ತನ್ನನ್ನು ಅಸ್ತಿತ್ವದ ಅಂಶವಾಗಿಯೂ, ಅಸ್ತಿತ್ವವನ್ನು ತನ್ನ ವಿಸ್ತರಣೆಯಾಗಿಯೂ ಗ್ರಹಿಸಲು ಸಾಧ್ಯವಾಗಬೇಕಾದರೆ ತನ್ನೆಲ್ಲ ತಿಳಿವಳಿಕೆ ಕ್ರಿಯೆಗಳೂ ಆ ದಿಸೆಯಲ್ಲಿಯೇ ಪ್ರವೃತ್ತವಾಗಬೇಕಾಗುತ್ತದೆ. ಇದು ವ್ಯಷ್ಟಿಯ ಹಂತದಲ್ಲಿ ಬಿಟ್ಟುಕೊಡುವಿಕೆಯಿಂದ ಪ್ರಾರಂಭವಾಗಿ ಸಮಷ್ಟಿಯ ಹಂತದಲ್ಲಿ ಪಡೆದುಕೊಳ್ಳುವಿಕೆಯಿಂದ ಪರಿಸಮಾಪ್ತವಾಗುತ್ತದೆ. ಹೀಗಿರುವಾಗ ಅರಿವಿನ ಪ್ರಕ್ರಿಯೆ ಯಜ್ಞವಾಗಬೇಕಾದರೆ ಅದೂ ಇದಕ್ಕೆ ಸಮಾನಾಂತರವಾಗಿಯೇ ಕೆಲಸ ಮಾಡಬೇಕಾಗುತ್ತದೆ. ಅರಿವವನು (ಜ್ಞಾತೃ), ಅರಿವಿನ ವಸ್ತು (ಜ್ಞೇಯ) ಮತ್ತು ಅರಿವು (ಜ್ಞಾನ) ಇವುಗಳ ಅಸ್ತಿತ್ವಾತ್ಮಕ ಏಕತೆಯನ್ನು ಮಾನ್ಯ ಮಾಡಿದಾಗ ಮಾತ್ರ ಈ ಬಗೆಯ ಪ್ರಕ್ರಿಯೆಗೆ ಚಾಲನೆ ದೊರೆಯಬಲ್ಲದು. ಈ ದೃಷ್ಟಿಯಿಂದ ಇಲ್ಲಿ ಅರಿಯುವಿಕೆಯೆನ್ನುವುದು ತೆರೆಯುವಿಕೆ ಮಾತ್ರವಲ್ಲದೆ ತೆರೆದುಕೊಳ್ಳುವಿಕೆಯೂ ಆಗುತ್ತದೆ. ಅಸ್ತಿತ್ವದೊಂದಿಗೆ ಕೂಡಿಸುವ ಅರಿವು



ಮಾತ್ರ ಪ್ರೀತಿ ಸೇವೆಗಳಿಗೆ ಕಾರಣವಾಗಬಲ್ಲದು. ಹೀಗಾಗಿ ಇಲ್ಲಿ ಅರಿಯುವಿಕೆಯೂ ಅದೇ, ಆಗುವಿಕೆಯೂ ಅದೇ.

ಕರ್ಮಕ್ಕೂ ಜ್ಞಾನಕ್ಕೂ ಇರುವ ಸಂಬಂಧ ಗೀತೆಯಲ್ಲಿ ಹಲವು ನೆಲೆಗಳಲ್ಲಿ ಚರ್ಚಿತವಾಗಿದೆ : ಹಲವು ಬಗೆಯ ಜಿಜ್ಞಾಸೆಗಳಿಗೂ ಕಾರಣವಾಗಿದೆ. ಈ ಜಿಜ್ಞಾಸೆಯನ್ನು ಅದರ ತಾತ್ತ್ವಿಕತೆಯಿಂದ ಕೆಲಮಟ್ಟಿಗೆ ಸಡಿಲಗೊಳಿಸುವ ಸ್ವಾತಂತ್ರ್ಯವನ್ನು ವಹಿಸಬಹುದಾದರೆ ಇನ್ನೊಂದು ಆಯಾಮದಲ್ಲಿ ಅದನ್ನು ಕ್ರಿಯೆ ಅಥವಾ ಅರಿವುಗಳ ನಡುವಿನ ಸಂಬಂಧದ ತಾತ್ತ್ವಿಕತೆಯಾಗಿಯೂ ನಿಷ್ಪನ್ನಗೊಳಿಸಿಕೊಳ್ಳಬಹುದು. ವ್ಯಷ್ಟಿಕೇಂದ್ರಿತವಾದ ಕ್ರಿಯೆ ಮತ್ತು ಅರಿವುಗಳಿಗೂ ಸಮಷ್ಟಿಯನ್ನು ದೃಷ್ಟಿಯಲ್ಲಿರಿಸಿಕೊಂಡ ಕ್ರಿಯೆ ಮತ್ತು ಅರಿವುಗಳಿಗೂ ಗುಣಾತ್ಮಕವಾದ ಅಂತರವಿರುವುದು ಮೇಲ್ನೋಟಕ್ಕೇ ಸ್ಪಷ್ಟವಾಗಿದೆ. ವ್ಯಷ್ಟಿಕೇಂದ್ರಿತವಾದ ಕ್ರಿಯೆಗಳು ಮುಖ್ಯವಾಗಿ ವ್ಯಕ್ತಿಗತ ಲಾಭ, ನಷ್ಟಗಳ ಕಡೆಗೆ ಪ್ರವೃತ್ತವಾಗಿರುತ್ತದೆ. ಇದಕ್ಕೆ ಹೊಂದಿಕೊಂಡಂತೆ ಇಲ್ಲಿನ ಅರಿವಿನ ವಲಯವೂ ಸಂಕುಚಿತವಾಗಿಯೇ ಇರುತ್ತದೆ. ಆದರೆ ವ್ಯಷ್ಟಿಯನ್ನು ಸಮಷ್ಟಿಯ ಭಾಗವಾಗಿ ಸ್ಥಾನೀಕರಿಸುವ ವಿಸ್ತೃತ ದೃಷ್ಟಿಯ ಅರಿವು ಮಾತ್ರ ಕ್ರಿಯೆಯನ್ನು ಸಂಕುಚಿತತೆಯಿಂದ ಪಾರುಮಾಡಿ ಸಮಾಜಮುಖಿಯಾಗಿಸಬಲ್ಲದು. ಇದು ಒಂದು ರೀತಿಯಲ್ಲಿ ಅರಿವಿನಿಂದ ಕ್ರಿಯೆಗೆ ದೊರೆಯಬೇಕಾದ ಚಿಕಿತ್ಸೆ ಎನ್ನಬೇಕು. ಗೀತೆಯ ಪರಿಭಾಷೆಯನ್ನು ಬಳಸಿಕೊಳ್ಳುವುದಾದರೆ ಅರಿವಿನ ಬೆಂಕಿಯಿಂದ ಕ್ರಿಯೆಯ ಸ್ವಾರ್ಥವನ್ನು ಸುಡಬೇಕಾಗುತ್ತದೆ. ಗೀತೆಯ ಮಾತುಗಳು ಹೀಗಿವೆ:

‘ಯಾವನ ಕರ್ಮಗಳೆಲ್ಲಾ ಕಾಮ ಸಂಕಲ್ಪಗಳಿಂದ ವರ್ಜಿತವಾಗಿವೆಯೋ, ಯಾರ ಕರ್ಮಗಳು ಜ್ಞಾನವೆಂಬ ಅಗ್ನಿಯ ದ್ವಾರಾ ಸುಡಲ್ಪಟ್ಟಿವೆಯೋ ಅವನನ್ನು ಜ್ಞಾನಿಗಳು ಪಂಡಿತನೆಂದು ಹೇಳುವರು.’ *(೪.೧೯)*

‘ತಾನಾಗಿ ಬಂದುದರಲ್ಲಿ ತೃಪ್ತಿಯುಳ್ಳವನೂ, ಲಾಭಾಲಾಭಗಳಲ್ಲಿ ಸಮಬುದ್ಧಿಯುಳ್ಳವನೂ ಆದ (ಯೋಗಿಯು) ಕರ್ಮವನ್ನು ಮಾಡಿದರೂ ಬದ್ಧನಾಗುವುದಿಲ್ಲ.’ *(೪.೨೨)*

‘ಆಸಕ್ತಿಯಿಲ್ಲದವನೂ ಮುಕ್ತನೂ ಜ್ಞಾನದಲ್ಲಿ ನೆಲೆಸಿರುವ ಮನಸ್ಸುಳ್ಳವನೂ ಮತ್ತು ಯಜ್ಞಕ್ಕೋಸ್ಕರವಾಗಿ ಕರ್ಮವನ್ನು ಆಚರಿಸುತ್ತಿರುವವನೂ ಆದ ಯೋಗಿಗೆ ಕರ್ಮವು ಸಮಗ್ರವಾಗಿ ನಾಶವಾಗುತ್ತದೆ.’ *(೪.೨೩)*

ಈ ಮಾತುಗಳ ಹಿನ್ನೆಲೆಯಲ್ಲಿ ಗ್ರಹಿಸಬೇಕಾದ ಸಂಗತಿ ಸ್ಪಷ್ಟವಾಗಿದೆ. ಗೀತೆಯು ಕಾಮಮೂಲವಾದ ಕ್ರಿಯೆಯನ್ನೂ ಅರಿವನ್ನೂ ಪರಸ್ಪರ ವೈರುಧ್ಯದಲ್ಲಿ ಇರಿಸುತ್ತದೆ. ಆದರೆ ಇಂದಿನ ಶೈಕ್ಷಣಿಕ ಸನ್ನಿವೇಶ ಇದಕ್ಕೆ ಸಂಪೂರ್ಣವಾಗಿ ಹೊರತಾಗಿದೆ. ಇಂದು ಒದಗಿಸಲಾಗುತ್ತಿರುವ ಅರಿವಿನ ಸ್ವರೂಪ ಕಾಮತೃಪ್ತಿಯನ್ನೇ ತನ್ನ ಧ್ಯೇಯವಾಗಿರಿಸಿಕೊಂಡಿದೆ. ವಾಣಿಜ್ಯಪ್ರಧಾನವಾದ ಶೈಕ್ಷಣಿಕತೆ ಬೌದ್ಧಿಕ ವಿವೇಚನೆಯನ್ನು ಕಲಿಸುವುದಕ್ಕೆ ಬದಲಾಗಿ ತನ್ನ ಅಭ್ಯರ್ಥಿಗಳಿಂದ ವಿವೇಚನಾರಹಿತಕೊಳ್ಳುಬಾಕ ಗ್ರಾಹಕ ವರ್ಗವನ್ನು ತಯಾರು ಮಾಡುವುದರಲ್ಲಿ ಹೆಚ್ಚು ಸಾರ್ಥಕವಾಗುತ್ತಿದೆ. ಒಂದೆಡೆ ಲಾಭ ಪ್ರಚೋದಕವಾದ ಶೈಕ್ಷಣಿಕತೆಯನ್ನು ಒಪ್ಪಿಕೊಳ್ಳುತ್ತ ಮತ್ತೊಂದೆಡೆ ಸಾಮಾಜಿಕ ಅಸಮಾನತೆ ಅಥವಾ ಪರಿಸರದ ಅಸಮತೋಲನದ ಬಗೆಗೆ ದೂರುವುದು ಈ ಕಾಲದ ವಿಪರ್ಯಾಸಗಳಲ್ಲಿ ಒಂದೆಂದೇ ಹೇಳಬೇಕಾಗಿದೆ.

ಗೀತೆಯು ವಿಭೂತಿಯೋಗವನ್ನೂ (ಅಧ್ಯಾಯ ೧೦) ವಿಶ್ವರೂಪ ದರ್ಶನವನ್ನೂ (ಅಧ್ಯಾಯ ೧೧) ನಮ್ಮ ಮುಂದಿರಿಸಿದೆ. ಇವಕ್ಕೆ ತಾತ್ವಿಕವಾದ ವಿಸ್ತರಣೆಗಳಿರುವುದು ನಿಜ. ಆದರೆ ಇವುಗಳ ಶೈಕ್ಷಣಿಕ ಅನ್ವಯದ ಬಗೆಗೆ ಕೂಡಾ ಆಲೋಚಿಸಬಹುದೆಂದು ತೋರುತ್ತದೆ. ವಿಭಜನೆ ಹಾಗೂ ಸಂಯೋಜನೆಗಳೆರಡೂ ತಿಳಿವಿನ ಆಯಾಮಗಳೇ ಆಗಿವೆ. ಇವಕ್ಕೆ ಹೊಂದಿಕೊಂಡಂತೆ ವಿಶ್ಲೇಷಣೆ ಹಾಗೂ ಸಂಶ್ಲೇಷಣೆಗಳು ನಡೆಯುತ್ತವೆ. ವಿಭೂತಿಯೋಗವು ಬಿಡಿ ವಿವರಗಳಿಗೆ ಸಂಬಂಧಿಸಿದಂತೆ ಒಂದು ವಿಸ್ತಾರದಲ್ಲಿ ಅಸ್ತಿತ್ವವನ್ನು ನಮ್ಮ ಮುಂದೆ ತೆರೆಯುತ್ತದೆ. ಅದರ ಗುಣಾತ್ಮಕ ಭಿನ್ನತೆಗಳನ್ನು ಪದರ ಪದರವಾಗಿ ಬಿಡಿಸುತ್ತದೆ. ಇಲ್ಲಿ ಒಂದು ಕಡೆ ಅಸ್ತಿತ್ವದ ವರ್ಗೀಕರಣವನ್ನು ಮುಂದಿಡಲಾಗುತ್ತಿದ್ದರೆ ಇನ್ನೊಂದು ಕಡೆ ಪ್ರತಿಯೊಂದು ವರ್ಗದ ಪ್ರತಿನಿಧೀಕರಣವೂ ಮುನ್ನೆಲೆಗೆ ಬರುತ್ತದೆ. ಹೀಗೆ ಈ ಬಗೆಯ ಪ್ರತಿನಿಧೀಕರಣದ ಮೂಲಕ ಪ್ರತಿಯೊಂದು ವರ್ಗದ ಉತ್ಕೃಷ್ಟತೆಯ ಸಾಧ್ಯತೆಗಳ ಅನಾವರಣವಾಗುತ್ತದೆ. ಅಸ್ತಿತ್ವಕ್ಕೆ ಒಂದೆಡೆ ಹರಡಿಕೊಳ್ಳುವಿಕೆಯ ಆಯಾಮವಿದ್ದರೆ ಇನ್ನೊಂದೆಡೆ ಮೊನಚಿನ ಆಯಾಮವೂ ಇದೆ. ಇವೆರಡೂ ಪರಸ್ಪರ ವಿರೋಧಗಳಾಗಿರದೆ ಪೂರಕಗಳೇ ಆಗಿವೆ. ಈ ದೃಷ್ಟಿಯಿಂದ ಇಲ್ಲಿನ ಪ್ರತಿನಿಧೀಕರಣ ಅಸ್ತಿತ್ವವನ್ನು ಕೂಡಿಸುವ ಸಂಗತಿಯಾಗಿದೆಯೇ ಹೊರತು ಒಡೆಯುವ ಸಂಗತಿಯಾಗಿಲ್ಲ. ಇದಕ್ಕೆ ಸಮಾನಾಂತರವಾಗಿ ತಿಳಿವಿನ ವಿಭಜನೆ ಮತ್ತು ಸಂಯೋಜನೆಗಳ ಗ್ರಹಿಕೆ ನಿಲ್ಲುತ್ತದೆ. ಇಲ್ಲಿನ ಅನುಗಮನ ಮತ್ತು ನಿಗಮನ ಎಲ್ಲ ಹೊರಚಾಚುಗಳೊಂದಿಗೆ ತಿಳಿವನ್ನು ಸಮಗ್ರತೆಯಲ್ಲಿ ಕಟ್ಟಿಕೊಳ್ಳುವ ಒಂದು ಉಪಕ್ರಮಕ್ಕೆ ನೆರ

ವಾಗುತ್ತದೆ. ಭಿನ್ನತೆಯಲ್ಲಿ ವಿಭಿನ್ನತೆಯನ್ನು ವಿಭಿನ್ನತೆಯಲ್ಲಿ ಭಿನ್ನತೆಯನ್ನು ಗುರುತಿಸಲು ಸಾಧ್ಯವಾದಾಗ ಮಾತ್ರ ಅರಿವು ಹಾಗೂ ಇರವುಗಳು ಪರಸ್ಪರ ಸಂಧಿಸಬಲ್ಲವು. 'ದಾರದಲ್ಲಿ ಮಣಿಗಳು ಪೋಣಿಸಲ್ಪಟ್ಟ ಹಾಗೆ' *(೭.೭)* ಎಂಬ ದರ್ಶನ ಅರಿವು ಹಾಗೂ ಇರವುಗಳ ಸಮನ್ವಯದ ದರ್ಶ ನವೂ ಆಗಿದೆ. ಅರಿವು-ಇರವುಗಳ ಸಮನ್ವಯದ ಕೊರತೆಯಿಂದಲೇ ಅರಿವಿನಲ್ಲಿ ಶ್ರೇಣೀಕರಣಗಳು ಉಂಟಾಗುತ್ತವೆ. ಅರಿವು ಗಳಲ್ಲಿಯೂ ದರ್ಜೆಗಳು, ತರತಮಗಳು ಏರ್ಪಡುತ್ತವೆ. ಕಲೆ, ವಿಜ್ಞಾನ, ತಂತ್ರಜ್ಞಾನ, ವಾಣಿಜ್ಯ ಮೊದಲಾದವುಗಳನ್ನು ವೈರುಧ್ಯಗಳಾಗಿಯೂ ಸೀಳುಗಳಾಗಿಯೂ ಗ್ರಹಿಸಲಾಗುತ್ತದೆ. ನಮ್ಮ ಸಮಕಾಲೀನ ಶೈಕ್ಷಣಿಕ ಸನ್ನಿವೇಶವೇ ಇದಕ್ಕೊಂದು ಉತ್ತಮ ಉದಾಹರಣೆ.

ಇನ್ನು 'ವಿಶ್ವರೂಪ'ವೆಂಬ ಸಮಾಸ ಸಂಯೋಜನೆಯೇ ವಿಶಿಷ್ಟವಾದ ಕಾಣ್ಕೆಯೊಂದನ್ನು ಮುಂದಿಡುತ್ತಿರುವಂತೆ ತೋರುತ್ತದೆ. ಅದು ರೂಪ-ಅರೂಪಗಳ ಸಂಗಮ ಬಿಂದು. ಇದು ಒಂದು ಆಯಾಮದಲ್ಲಿ ವಿಶ್ವವನ್ನು ರೂಪದಲ್ಲಿ ನಿಲ್ಲಿಸಿದರೆ ಇನ್ನೊಂದು ಆಯಾಮದಲ್ಲಿ ರೂಪವನ್ನು ವಿಶ್ವದಲ್ಲಿ ಕರಗಿಸುತ್ತಲೂ ಇರುತ್ತದೆ. ಹೀಗೆ ಕಟ್ಟುವ ಹಾಗೂ ಕರಗಿಸುವ ಎರಡು ಆಯಾಮಗಳು ಮಾತ್ರ ಅರಿವಿನ ಪ್ರಕ್ರಿಯೆಯನ್ನು ಸಾರ್ಥಕವಾಗಿಸಲು ಸಾಧ್ಯ. ಕರಗಿಸದ ಕಟ್ಟುವಿಕೆ ಕೇವಲ ಅಹಮಿಕೆಯಾಗಿ ಮಾತ್ರ ವಾಸ್ತವವಾಗಬಲ್ಲದು. ವಿಶ್ವರೂಪದ ದರ್ಶನವೇ ಅಗಾಧತೆಯೊಂದರ ದರ್ಶನ. ಇಲ್ಲಿ ತನ್ನ ಕುಬ್ಜತೆಯೂ ವಿಶ್ವದ ವಿಸ್ತೃತಿಯೂ ಏಕಕಾಲದಲ್ಲಿ ಅನಾವರಣವಾಗುತ್ತದೆ. ಇಷ್ಟಲ್ಲದೆ ಇದು ಕುಬ್ಜತೆಗೆ ಇರುವ ವಿಸ್ತೃತಿಯ ಸಾಧ್ಯತೆಯೂ ಹೌದು. ಗೀತೆಯ ಪ್ರಕಾರವೇ, ತನ್ನನ್ನು ಎಲ್ಲರಲ್ಲಿಯೂ ಎಲ್ಲರಲ್ಲಿ ತನ್ನನ್ನೂ ಕಾಣುವುದರಲ್ಲಿಯೇ *(೬.೨೯)* ಯೋಗವಿದೆ. ಅರಿವು ಇರವಿನಲ್ಲಿ ಸಂಗಮಿಸುವ ರೀತಿ ಇದು. ವ್ಯಕ್ತಿ ಹಾಗೂ ವಿಶ್ವಗಳ ಈ ಕೂಡುವಿಕೆಗೆ ಬೇಕಾದ ಅಸ್ತಿತ್ವಾತ್ಮಕ ಭೂಮಿಕೆಯನ್ನು ಗೀತೆ ಸಿದ್ಧಪಡಿಸಿದೆ. ಅದರ ಆಧಾರದ ಮೇಲೆ ಹಲವು ಶಿಸ್ತುಗಳನ್ನು ರೂಪಿಸಲು ನೋಡಬಹುದು. ಈ ದಿಸೆಯಲ್ಲಿ ಇದೊಂದು ಕಿರು ಪ್ರಯತ್ನ.

## ಗೀತೆಯು ಪ್ರಕ್ಷಿಪ್ತವೆ?

ಗೀತೆಯನ್ನು 'ಮಹಾಭಾರತ'ದ ನಡುವೆ ಸೇರಿಸಲಾಯಿತೆ? ಕೆಲವು ಮಂದಿ ಪಾಶ್ಚಾತ್ಯ ವಿದ್ವಾಂಸರ ಪ್ರಕಾರ ಗೀತೆಯು ಪ್ರಕ್ಷಿಪ್ತ (ಮೂಲದಲ್ಲಿಲ್ಲದೆ, ಅನಂತರ ಸೇರಿಸಿದ್ದು) ಭಾಗ. ಇದೇ ಅಭಿಪ್ರಾಯವನ್ನು ಹಲವು ಮಂದಿ ಭಾರತೀಯ ವಿದ್ವಾಂಸರೂ ಹಾಗುಹಾಗೇ ಸ್ವೀಕರಿಸಿದ್ದಾರೆ. ಪ್ರಾಚೀನ ಭಾರತದ ಬಗ್ಗೆ ಚಾರಿತ್ರಿಕ ಕುರುಹುಗಳೇ ಇಲ್ಲ ಎಂದು ಅವರು ಹೇಳುತ್ತಾರೆ. ಆದ್ದರಿಂದ ಕುರುಕ್ಷೇತ್ರ ಯುದ್ಧ ಆರಂಭವಾಗುವಾಗ ಅಂತಹ ಉನ್ನತ ತತ್ತ್ವಗಳನ್ನು ಬೋಧಿಸಲಾಯಿತು ಎಂಬುದು ಅತಾರ್ಕಿಕ ಎಂಬುದು ಅವರ ವಾದ. ಈ ಮಾತನ್ನು ನಂಬುವ ಮೊದಲು, ಹೀಗೊಂದು ಬೋಧನೆ ಸಾಧ್ಯವೇ ಎಂಬುದನ್ನು ಕಂಡುಕೊಳ್ಳಬೇಡವೆ?

ಇದಕ್ಕೆ ಇರುವ ಉತ್ತರ ಇದೊಂದೇ: ಅವರು ಭಾರತದಷ್ಟೇ ಪ್ರಾಚೀನರಾಗಲಿ. ಆಗ ನೋಡೋಣ, ಅವರಿಗೆ ಅದೆಷ್ಟು ಚರಿತ್ರೆಯನ್ನು ಉಳಿಸಲಾದೀತು ಎಂದು. ಭಾರತ ಎಷ್ಟು ಪ್ರಾಚೀನ! ಅದೆಷ್ಟು ಕ್ರಾಂತಿ, ಬದಲಾವಣೆಗಳು ಇಲ್ಲಿ ನಡೆದವು! ಅದೆಷ್ಟು ಬಾರಿ ಇಲ್ಲಿ ಸರ್ವನಾಶವಾಗಿಲ್ಲ, ಅನಂತರ ಎಷ್ಟೊಂದು ಬಾರಿ ಪುನರ್ನಿರ್ಮಾಣವಾಗಿಲ್ಲ! ಪಾಶ್ಚಾತ್ಯವು ಏನನ್ನು ತಿಳಿದುಕೊಳ್ಳಬಲ್ಲುದು? ಅದು ನಿನ್ನೆ ತಾನೇ ಹುಟ್ಟಿದ ಹಸುಳೆ. ಭಾರತವು ಯುಗಯುಗಗಳಿಗಿಂತಲೂ ಮೊದಲೇ ಕಂಡುಹಿಡಿದಿದ್ದ ವಿಚಾರಗಳನ್ನು ಪಶ್ಚಿಮವು ಈಗ ಕಂಡುಹಿಡಿಯುತ್ತಿದೆ ಅಷ್ಟೆ. ಒಂದು ಕಾಲದಲ್ಲಿ ಭಾರತವು ಎಂತಹ ಉಚ್ಛ್ರಾಯ ಸ್ಥಿತಿಯನ್ನು ತಲುಪಿತ್ತು ಎಂದು ತಿಳಿದುಕೊಂಡರೆ ಸಾಕು. ಭಾರತದಂತೆ ವಿಶ್ವವಿಶಾಲ ಸ್ವೀಕಾರ ಮನೋಧರ್ಮ ಜಗತ್ತಿನಲ್ಲಿ ಬೇರೆಲ್ಲಿತ್ತು ? ಕೀಳುಜಾತಿಯವನಿಂದಲೂ ವಿದ್ಯೆಯನ್ನು ಸ್ವೀಕರಿಸಬಹುದು ಎಂದು ನಮ್ಮ ಶಾಸ್ತ್ರಗಳು ಹೇಳುತ್ತವೆ. ಏಕೆಂದರೆ ವಿದ್ಯೆಯೆಂಬುದು ಸಾಕ್ಷಾತ್ ದೇವರು. ಜ್ಞಾನವು ಎಲ್ಲ ಕರ್ಮಗಳನ್ನೂ ಸುಟ್ಟು ಭಸ್ಮ ಮಾಡುವುದೆಂದು ಗೀತೆಯೂ ಹೇಳುತ್ತದೆ.

ಗೀತಾಸಂದೇಶವನ್ನು ನೀಡಿದವನು ನಮ್ಮ ನಿಮ್ಮಂತೆ ಸಾಮಾನ್ಯವ್ಯಕ್ತಿಯಲ್ಲ; ಅವತಾರಪುರುಷ ಶ್ರೀಕೃಷ್ಣನೇ ಅದನ್ನು ನೀಡಿದ. ಮಹಾಭಾರತದ ಭಾಷೆಗೂ ಗೀತೆಯ ಭಾಷೆಗೂ ಯಾವುದೇ ವ್ಯತ್ಯಾಸ ಕಂಡುಬರುವುದಿಲ್ಲ. ಹೀಗಿರುವಾಗ ನಾವು ಆಧುನಿಕ ವಿದ್ವಾಂಸರ ವಾದವನ್ನು ಹೇಗೆ ಒಪ್ಪಲಾದೀತು? ಜೀವನದ ಆಘಾತವೆಂದು ನಾವು ಭಾವಿಸುವ ಯಾವುದೇ ಗಂಡಾಂತರಗಳಿಂದ ಮಹಾಪುರುಷರು ಸ್ವಲ್ಪವೂ ವಿಚಲಿತರಾಗುವುದಿಲ್ಲ ಎಂಬುದನ್ನು ಮಹಾತ್ಮರೊಂದಿಗೆ ಜೀವಿಸಿದವರು ಕಂಡಿರುತ್ತಾರೆ. ಶ್ರೀರಾಮಕೃಷ್ಣರ ಜೀವನದ ಕೊನೆಯ ಭಾಗದಲ್ಲಿ ನಾವೂ ಇದನ್ನು ಕಂಡಿದ್ದೇವೆ. ಅರ್ಜುನನು ಅವತಾರಪುರುಷನ ಜೊತೆಗಿದ್ದವನು. ನಿಜಕ್ಕೂ, ಅರ್ಜುನನಿಗೆ ಬೋಧಿಸಲು ಎಷ್ಟು ಸಮಯವಾದರೂ ತೆಗೆದುಕೊಂಡೀತು? ಆದ್ದರಿಂದ ಗೀತೆ ಪ್ರಕ್ಷಿಪ್ತ ಭಾಗವಲ್ಲ.

— ಸ್ವಾಮಿ ಶಾರದಾನಂದ *('The Essence of the Gita' ಎಂಬ ಗ್ರಂಥದಲ್ಲಿ, ಪು. ೭-೯)*